**Scholarly Research Journal for Interdisciplinary Studies**
Online ISSN 2278-8808, SJIF 2025 = 8.486
Peer Reviewed & Refereed Journal, AUG-SEPT 2025, Vol- 13/86

# SOCIAL CHANGES IN KANNADA LITERATURE – ANALYSIS

**Smita. H. S**

*Associate Professor of Kannada, Government First Grade College, Tiptur*

**Paper Received On**: 20 AUGUST 2025

**Peer Reviewed On:** 24 SEPTEMBER 2025

**Published On:** 01 OCTOBER 2025

***Abstract***

*Kannada literature, published in various forms, has continuously reflected the inner views and social attitudes of human society and is still moving in the direction of social upliftment. Kannada literature has poetically conveyed the inner and outer aspects of a complex society and has also suggested its solution. The Vachana literary genre, which came as a movement in Kannada literature, launched the reform work of providing equality to women under the divine guidance of Basavanna and became a spokesperson for women's empowerment in the mainstream of society, shining as a wise man in the male-dominated religious field. And it was possible to understand spiritual thoughts from the perspective of the community in a simple way. It was possible to attain the stage of self-elevation of finding simple life values.*

# ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಬದಲಾವಣೆಗಳು - ವಿಶ್ಲೇಷಣೆ

**ಸ್ಮಿತಾ. ಎಚ್ ಎಸ್**

ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಿಪಟೂರು

## ಪ್ರಸ್ತಾವನೆ

ಕನ್ನಡ ಸಾಹಿತ್ಯವು ವಿವಿಧ ಪ್ರಕಾರಗಳಲ್ಲಿ ಪ್ರಕಟಗೊಳ್ಳುತ್ತಾ ಮಾನವನ ಸಮಾಜದ ಒಳ ನೋಟಗಳನ್ನು ಮತ್ತು ಸಾಮಾಜಿಕ ನಿಲುವುಗಳನ್ನು ನಿರಂತರವಾಗಿ ಪ್ರತಿಬಿಂಬಿಸುತ್ತಾ ಬಂದಿದ್ದು ಇಂದಿಗೂ ಸಮಾಜೋದ್ಧಾರದ ದಿಕ್ಕಿನಲ್ಲಿ ಸಾಗುತ್ತಿದೆ. ಕನ್ನಡ ಸಾಹಿತ್ಯವು ಸಂಕೀರ್ಣ ಸಮಾಜದ ಒಳ ಹೊರಗುಗಳನ್ನು ಕಾವ್ಯಾತ್ಮಕವಾಗಿ ತಿಳಿಸಿ ಕೊಡುತ್ತಾ ಅದರ ಪರಿಹಾರವನ್ನೂ ಸಹ ಸೂಚಿಸಿದೆ. ಕನ್ನಡ ಸಾಹಿತ್ಯದಲ್ಲಿ ಚಳುವಳಿಯೋಪಾದಿಯಂತೆ ಬಂದ ವಚನ ಸಾಹಿತ್ಯ ಪ್ರಕಾರವು ಬಸವಣ್ಣನವರ ದಿವ್ಯ ಮಾರ್ಗದರ್ಶನದಲ್ಲಿ ಮಹಿಳೆಯರಿಗೆ ಸಮಾನತೆ ದೊರಕಿಸಿಕೊಡುವ ಸುಧಾರಣಾ ಕಾರ್ಯಕ್ಕೆ ಚಾಲನೆ ನೀಡಿ ಪುರುಷ ಪ್ರಧಾನವಾಗಿದ್ದ ಸಮಾಜೋ ಧಾರ್ಮಿಕ ಕ್ಷೇತ್ರದಲ್ಲಿ ಜ್ಞಾನವಂತಳಾಗಿ ಬೆಳಗುತ್ತಾ ಸಮಾಜದ ಮುಖ್ಯ ವಾಹಿನಿಯಲ್ಲಿ ಗುರುತಿಸಿಕೊಂಡಳು ಮಹಿಳಾ ಸಬಲೀಕರಣದ ವಕ್ತಾರಳಾದಳು.

*Copyright © 2025, Scholarly Research Journal for Interdisciplinary Studies*

ಹಾಗು ಆಧ್ಯಾತ್ಮಿಕ ಚಿಂತನೆಗಳನ್ನು ಸಮಷ್ಟಿಯ ದೃಷ್ಟಿಕೋನದಿಂದ ಸರಳವಾಗಿ ಅರ್ಥಸಿಕೊಳ್ಳಲು ಸಾದ್ಯವಾಯಿತು. ಸರಳಜೀವನ ಮೌಲ್ಯಗಳನ್ನು ಕಂಡು ಕೊಳ್ಳುವ ಅತ್ಮೋನ್ನತಿಯ ಹಂತವನ್ನು ಪಡೆದುಕೊಳ್ಳಲು ಸಾಧ್ಯವಾಯಿತು.

೧. ವಚನ ಸಾಹಿತ್ಯದಲ್ಲಿ ಸಾಮಾಜಿಕ ಬದಲಾವಣೆಗಳ ಪ್ರತಿಧ್ವನಿ - ೧೨ ನೇ ಶತಮಾನದಲ್ಲಿಯೇ ಬಸವಣ್ಣನವರು ಜಾತಿ ಪದ್ವತಿ , ಅಸಮಾನತೆ , ಸಾಮಾಜಿಕ ವರ್ಗೀಕರಣ , ಅಸ್ಪೃಶ್ಯತೆ ವಿರುದ್ದ ಸಮರ ಸಾರಿದರು. ಅಲ್ಲಮ ಪ್ರಭು , ಅಕ್ಕ ಮಹಾದೇವಿ, ಚನ್ನ ಬಸವಣ್ಣ , ಶಿವಲೆಂಕ ಮಂಚಣ್ಣ , ಮೈದುನ ರಾಮಯ್ಯ , ನೀಲಾಂಬಿಕೆ, ಅಕ್ಕಮ್ಮ , ಅಂಬಿಗರ ಚೌಡಯ್ಯ , ಸಿದ್ದರಾಮ , ಜೇಡರ ದಾಸೀಮಯ್ಯ , ಮೋಳಿಗೆ ಮಾರಯ್ಯ , ಸಕಲೇಶ ಮಾದರಸ , ಉರಿಲಿಂಗಿ ದೇವ - ಮೊದಲಾದ ಶಿವಶರಣರು ಬೆಳೆಸಿದ ವಚನ ಸಾಹಿತ್ಯವು ಸಮಾಜದ ಉನ್ನತಿಗಾಗಿ ಮಾನವೀಯ ಸಂಬಂಧಗಳ ನೆಲೆಗಳನ್ನು ಗಟ್ಟಿಗೊಳಿಸುವ ಸಾಹಿತ್ಯದ ಪ್ರತೀಕವಾಯಿತು. ವಚನಗಳು ಸಮಾಜದ ಜನರ ಜೀವನವನ್ನು ವಿಡಂಬನಾತ್ಮಕವಾಗಿ ವಿವರಿಸುತ್ತಾ , ಅಧರ್ಮದ ಕಡೆಗೆ ಜನರು ಹೊರಳದಂತೆ ವಚನಗಳ ಮೂಲಕ ಎಚ್ಚರಿಸುತ್ತಾ ಸರಳೋಪಾಯಗಳ ಮೂಲಕ ಸಮಾಜೋದ್ದಾರದ ಕಡೆಗೆ ತಿರುಗಿಸಿದ ಕೀರ್ತಿಯನ್ನು ಹೊಂದಿದೆ. ಸಮಾಜದ ಸಾಮುದಾಯಿಕ ಒಳಗೊಳ್ಳುವಿಕೆಯು ಸಮಾಜೋದ್ದಾರದ ಶ್ರಮಗಳನ್ನು ಎತ್ತಿ ಹಿಡಿಯುತ್ತದೆ ಎಂಬುದಕ್ಕೆ ವಚನ ಚಳುವಳಿ ಸಾಕ್ಷಿಯಾಗಿದೆ. ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ ಇದೇ ಅಂತರಂಗದ ಶುದ್ದಿ ಎನ್ನುತ್ತಾ ಈ ಅಂತರಂಗವು ಶುಧ್ದವಾದಾಗ ಮಾತ್ರ ಭಗವಂತನನ್ನು ಕಾಣಲು ಸಾದ್ಯ ಎಂದರು. ಮಹಿಳ ಜಾಗೃತಿಗೆ ನಾಂದಿ ಹಾಡಿದ ಅಕ್ಕಮಹಾದೇವಿ , ಲಿಂಗಮ್ಮ ಅಕ್ಕಮ್ಮ, ಸಂಕವ್ವ ಕಾಳವ್ವೆ, ಗೊಗ್ಗವ್ವೆ ಆಮುಗೆ ರಾಯಮ್ಮ, ಅಕ್ಕಮ್ಮ ನೀಲಾಂಬಿಕೆ, ರೆಮ್ಮವ್ವೆ , ಕಾಮವ್ವೆ , ಗಂಗವ್ವೆ , ಸೋಮವ್ವೆ , ಕಾಮವ್ವೆ , ನಾಗಮ್ಮ , ನೀಲಮ್ಮ, ಸತ್ಯಕ್ಕ ಮೊದಲಾದ ವಚನಕಾರ್ತಿಯರಿಗೆ ಮಹಿಳಾ ಸಬಲೀಕರಣದ ಪ್ರಕ್ರಿಯ ಕಡೆಗೆ ಹೊರಳಲು ದಾರಿ ದೊರಕಿತು. ಸತ್ಯ ಸದಾಚಾರ ವೆಂಬ ಸಂಪತ್ತು ಶಿವಭಕ್ತರಲ್ಲಿರಬೇಕು ಎಂದ ಶರಣರು ಹೊಲಸು ತಿಂಬವನೇ ಹೊಲೆಯ ಎನ್ನುತ್ತಾ ಸಮಾಝುವನ್ನು ಒಡೆಯುವ ಕಾರ್ಯದಲ್ಲಿ ತೊಡಗಿದ್ದ ಮತಾಂಧರಿಗೆ ತಕ್ಕ ಉತ್ತರ ಕೊಟ್ಟರು. ಮಾನವರ ನಡುವೆ ಜಾತಿ ಗೋಡೆಯಲ್ಲಿ ಇವನಾರವ ಇವನಾರವ ಎಂದು ಎಣಿಸದೇ ಇವ ನಮ್ಮವ ಇವ ನಮ್ಮವ ಎಂದು ಹೇಳಿ ಅವರನ್ನು ಒಪ್ಪಿಕೊಳ್ಳಿ ಎಂದು ಪ್ರತಿಪಾದಿಸುತ್ತಾ ಘೋರ ತಪವ ಮಾಡಿದರೇನು ಅಂತ ರಂಗ ಶುದ್ದಿ ಇಲ್ಲದ ಮೇಲೆ ಎನ್ನುತ್ತಾ ಸಮಾಜೋ- ಧಾರ್ಮಿಕ ಕ್ಷೇತ್ರದ ಹುಳುಕುಗಳನ್ನು ವಿಡಂಬನಾತ್ಮಕವಾಗಿ ಚಿತ್ರಿಸಿ ಸಾಮಾನ್ಯ ಮನುಜನಿಗೂ ಅರ್ಥವಾಗುವಂತೆ ಭಗವಂತನ ಸಾನಿಧ್ಯ ಪಡೆದುಕೊಳ್ಳುವ ವಿಧಾನಗಳನ್ನು ತಿಳಿಸಿಕೊಟ್ಟು ಸಮಾನತೆ, ಸರ್ವರ ಉದ್ದಾರದಂತಹ ಸಾರ್ವಕಾಲಿಕವಾದ ಸಾಮಾಜಿಕ ತತ್ವಗಳನ್ನು ಜಗತ್ತಿಗೆ ಕೊಡುಗೆಯಾಗಿ ನೀಡಿ ವಚನ ಸಾಹಿತ್ಯವು ಸಮಾಜೋಧ್ದಾರಕ್ಕೆ ಭದ್ರ ಬುನಾದಿ ಹಾಕಿ ಕೊಟ್ಟಿತು.

೨. ದಾಸ ಸಾಹಿತ್ಯದಲ್ಲಿ ಸಾಮಾಜಿಕ ಬದಲಾವಣೆಗಳ ಪ್ರತಿಧ್ವನಿ - ದಾಸ ಸಾಹಿತ್ಯವು ಜಾತಿ ಆಧಾರಿತ ತಾರತಮ್ಯದ ವಿರುದ್ದ ಹೋರಾಟ , ಸಾಮಾಜಿಕ ನ್ಯಾಯ ಪ್ರತಿಪಾದನೆ , ಸ್ವತಂತ್ರ ಮಾನವ

*Copyright © 2025, Scholarly Research Journal for Interdisciplinary Studies*

ಅಸ್ತಿತ್ವ ಪ್ರತಿಪಾದನೆ ಮತ್ತು ಶೋಷಿತರ ಅನುಭವಗಳ ಅನಾವರಣ ಮಾಡುತ್ತಾ ಎಲ್ಲರೂ ಒಂದೇ ಎಂಬ ಮಂತ್ರವನ್ನು ಜಗತ್ತಿಗೆ ನೀಡಿತು. ಪುರಂದರ ದಾಸರು, ಕನಕ ದಾಸರು , ಜಗಪತಿ ದಾಸರು, ಕೇಶವ ದಾಸರು, ಅಚ್ಯುತ ದಾಸರು , ನರಹರಿ ದಾಸರು , ಮೊದಲಾದ ಹರಿ ಭಕ್ತರು ತಮ್ಮ ಕೀರ್ತನೆಗಳ ಮೂಲಕ ಸಾಮಾಜಿಕ ಮೌಢ್ಯವನ್ನು ಹೋಗಲಾಡಿಸಲು ಪ್ರಯತ್ನಿಸಿದರು. ಭಗವಂತನ ಸಾಮೀಪ್ಯ ಪಡೆಯಲು ಜಾತಿ ವರ್ಗಗಳ ಗೋಡೆಯನ್ನು ನಿವಾರಿಸುವ ಮಾರ್ಗಗಳನ್ನು ದಾಸ ಸಾಹಿತಿಗಳು ಅನ್ವೇಷಿಸಿದರು. ಯಾವುದೇ ಜಾತಿ ಧರ್ಮದ ಗೊಡವೆ ಇಲ್ಲದೇ , ಸಾಮಾಜಿಕ ಅಂತಸ್ತುಗಳ ಕೃತಕ ಶ್ರೇಣಿಗಳಿಲ್ಲದೇ ಮಾನವ ಜೀವನ ನಡೆಸುವುದು ಸಾದ್ಯ ಎಂದು ದಾಸವರೇಣ್ಯರು ತಿಳಿಸಿಕೊಟ್ಟರು. ಸಮಾಜದ ಶಾಂತಿ ಮತ್ತು ಸುವ್ಯವಸ್ಥಿತ ನಿರ್ವಹಣೆಗೆ ಮಾನವನ ಸಾಂಘಿಕ ಬದುಕು ಹಲವಾರು ಆಯಾಮಗಳಲ್ಲಿ ಪ್ರಭಾವಿತವಾಗುತ್ತದೆ ಅದನ್ನು ಸರಳವಾಗಿ ಅವಲೋಕಿಸಿದಾಗ ಭಕ್ತನಿಗೆ ಗೆಲುವು ದೊರೆಯುತ್ತದೆ ಎಂದು ತಿಳಿಸಿದ ದಾಸರು ಭಕ್ತಿ ಚಳುವಳಿಯ ಮೂಲಕ ಸಮಾಜದ ಉನ್ನತಿಗೆ ಶ್ರಮಿಸಿದರು. ಆ ಕಾಲದ ರಾಜಕೀಯ ವಿಪ್ಲವಗಳ ನಡುವೆಯೂ ಸರಳ ಸಾಮಾಜಿಕ ಚಿಂತನೆಗಳನ್ನು ಹರಿ ಬಿಟ್ಟ ದಾಸ ಸಾಹಿತ್ಯ ಇಂದಿಗೂ ಕನ್ನಡ ಸಾಹಿತ್ಯದ ಬಹು ಪ್ರಭಾವಿ ಪ್ರಕಾರವಾಗಿದೆ.

೩. ನವೋದಯ ಸಾಹಿತ್ಯದಲ್ಲಿ ಸಾಮಾಜಿಕ ಬದಲಾವಣೆಗಳ ಪ್ರತಿಧ್ವನಿ- ನವೋದಯ ಸಾಹಿತ್ಯ ಕಾಲದಲ್ಲಿಯೂ ಸಹ ಸಾಮಾಜಿಕ ವಿಷಯಗಳನ್ನು ಬಳಸಿಕೊಂಡು ಅನೇಕ ಕೃತಿ ರಚನೆಯಾದವು. ಕುವೆಂಪು , ಶಿವರಾಮ ಕಾರಂತ , ಗೊರೂರು ರಾಮಸ್ವಾಮಿ ಐಯ್ಯಂಗಾರ್, ಮಂಜೇಶ್ವರ ಪೈ , ಗೋಪಾಲ ಕೃಷ್ಣ ಅಡಿಗ , ಕೆ ಎಸ್ ನರಸಿಂಹ ಸ್ವಾಮಿ , ಬಿ ಎಂ ಶ್ರೀ, ದ ರಾ ಬೇಂದ್ರೆ , ಪು ತಿ ನರಸಿಂಹಾಚಾರ್ ಮೊದಲಾದವರ ಅವರ ಬರಗಳಲ್ಲಿ ಸಾಮಾಜಿಕ ಕಳಕಳಿ ಎದ್ದು ಕಾಣುತ್ತದೆ. ಸಾಮಾಜಿಕ ಜಾಗೃತಿಯನ್ನು ಪ್ರತಿಬಿಂಬಿಸುತ್ತಾ ಸಮಾಜದ ವಿಷಯಗಳನ್ನು ಚರ್ಚಿಸುವ ಹಂತಕ್ಕೆ ಸಾಹಿತ್ಯ ತಲುಪಿತು.ಕುವೆಂಪು ಅವರ ಮಲೆಗಳಲ್ಲಿ ಮದುಮಗಳು , ಕಾನೂರ ಸುಬ್ಬಮ್ಮ ಹೆಗ್ಗಡತಿ , ಮಾಸ್ತಿ ಅವರ ಕಾಕನ ಕೋಟೆ , ಶಿವರಾಮ ಕಾರಂತದ ಚೋಮನ ದುಡಿ , ಬೆಟ್ಟದ ಜೀವ , ಮೂಕಜ್ಜಿಯ ಕನಸುಗಳು ಮೊದಲಾದ ಕೃತಿಗಳು ಅಂದಿನ ಸಮಾಜದ ಒಳ ಹೊರಗುಗಳನ್ನು ಚೆನ್ನಾಗಿಯೇ ಅನಾವರಣಗೊಳಿಸಿವೆ. ಗ್ರಾಮೀಣ ಸಮಾಜವನ್ನು , ಸಾಮಾಜಿಕ ಶೋಷಣೆಗಳನ್ನು ಮಾನವ ಹಕ್ಕುಗಳ ವಿರೋಧಾಭಾಸವನ್ನು ಗೊರೂರು ಅವರ ಹಳ್ಳಿಯ ಚಿತ್ರಗಳು , ಮೆರವಣಿಗೆ ಮೊದಲಾದ ಕೃತಿಗಳಲ್ಲಿ ಕಾಣಬಹುದು. ಕಲ್ಪನೆ ಆಧಾರಿತ ಭಾವಗಳ ಮೂಲಕ ಅಮೂರ್ತವಾದುದರ ಹುಡುಕಾಟ,ಅಮೂರ್ತ ಸೌಂದರ್ಯದ ವರ್ಣನೆ ಕಾಣುತ್ತೇವೆ. ಬೇಂದ್ರೆ, ಕೆ.ಎಸ್.ನರಸಿಂಹಸ್ವಾಮಿ ಆಡುಮಾತಿನ ಧಾಟಿಯನ್ನು ಅನುಸರಿಸಿದರು. ನಿಸರ್ಗದ ವರ್ಣನೆಯೊಂದಿಗೆ ಮನುಷ್ಯ ಸಂಬಂಧದ ತಾದಾತ್ಮ್ಯವನ್ನು ಕುವೆಂಪು ಅವರ ಪಕ್ಷಿಕಾಶಿ, ಬೇಂದ್ರೆಯವರ ಸಾಧನಕೇರಿ ರಚನೆಗಳು ನಿರೂಪಿಸುತ್ತವೆ. ಇಂಗ್ಲಿಷ್ ಸಾಹಿತ್ಯದ ಓದು, ಅನುವಾದ ಕ್ರಿಯೆಗಳು ಭಾವಗೀತೆ, ಕಾದಂಬರಿ ,ಲಲಿತ ಪ್ರಬಂಧ, ಸುನೀತ, ಕಥನಕವನದಂತಹ ಹೊಸ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಳ್ಳುವುದರ ಜೊತೆಗೆ ಸಾಮಾನ್ಯ ಜನರು ಕೃತಿಯ ನಾಯಕರಾದರು. ಈ ಕಾಲದ ಕಾದಂಬರಿಗಳಲ್ಲೆಲ್ಲಾ ಮಹಿಳಾ ಶಿಕ್ಷಣ, ಸಮಾನತೆ, ಸ್ವಾತಂತ್ರ್ಯ, ವಿಧವಾ ವಿವಾಹ -ಘಟನೆಗಳು ಸುಧಾರಣಾ ಆಶಯವನ್ನು ಒಳಗೊಂಡಿದೆ.

*Copyright © 2025, Scholarly Research Journal for Interdisciplinary Studies*

೪. ನವ್ಯ ಕಾವ್ಯ ಸಾಹಿತ್ಯದಲ್ಲಿ ಸಾಮಾಜಿಕ ಬದಲಾವಣೆಗಳ ಪ್ರತಿಧ್ವನಿ- ಕನ್ನಡ ಸಾಹಿತ್ಯ ಇತಿಹಾಸದಲ್ಲಿ ನವ್ಯ ಕಾವ್ಯ ಪರಂಪರೆಯು ನೂತನವಾದ ಹೊಸ ಸಾಹಿತ್ಯ ಪರಂಪರೆಗೆ ಸಾಕ್ಷಿಯಾಯಿತು. ನವ್ಯ ಕಾವ್ಯದಲ್ಲಿ ವೈವಿಧ್ಯಮಯ ರೀತಿಯಲ್ಲಿ ಕವಿಯ ಭಾವನಾತ್ಮಕ ಆಯಾಮಗಳು ಪ್ರಕಟವಾದವು. ಕವಿಯ ಕಲ್ಪನೆಯು ವಿನೂತನ ಕಾವ್ಯ ತಂತ್ರ ವಿಧಾನಗಳ ಮೂಲಕ ಸಾಮಾಜಿಕ ಅಸ್ತಿತ್ವವನ್ನು ಪ್ರತಿಬಿಂಬಿಸುವ ಗುರುತರವಾದ ಕಾರ್ಯವನ್ನು ಮಾಡಿದೆ. ನವ್ಯ ಕಾವ್ಯವು ಸಾಮಾಜಿಕವಾಗಿ ಸಮಷ್ಟಿಯ ಕ್ಷೇಮ ಚಿಂತನೆ , ಸಮಾಜವನ್ನು ಒಂದಾಗಿ ಬೆಸೆಯುವ ಭಾವ , ಮಾನವೀಯ ಮೌಲ್ಯಗಳ ಸರಳೀಕೃತ ಪ್ರತಿಪಾದನೆ ದಿವ್ಯ ಆದರ್ಶಗಳ ಸಮ್ಮಿಳಿತ ಕಾವ್ಯ ಪ್ರಕಾರವಾಗಿದೆ . ಸಾಮಾಜಿಕ ಜೀವನ ಮೌಲ್ಯಗಳನ್ನು ಶೋಧನೆ ಮಾಡುತ್ತಾ ನವೋದಯ ಕಾವ್ಯಕ್ಕೆ ಪ್ರತಿಯಾಗಿ ನವ್ಯ ಕಾವ್ಯದ ಸಾಹಿತಿಗಳು ಗುರುತಿಸಿಕೊಳ್ಳತೊಡಗಿದರು. ನವೋದಯ ಕಾವ್ಯದ ಹಿರಿಯ ಕವಿಗಳಾದ ಜಿ ಎಸ್ ಶಿವರುದ್ರಪ್ಪ , ಕೆ ಎಸ್ ನರಸಿಂಹಸ್ವಾಮಿ ನವ್ಯ ಕಾವ್ಯದ ಹಾದಿಯಲ್ಲಿ ಬರೆಯ ತೊಡಗಿದಾಗ ಕನ್ನಡ ಸಾಹಿತ್ಯ ಲೋಕ ಹೊಸ ಕಾಲ ಘಟ್ಟಕ್ಕೆ ತೆರೆದು ಕೊಂಡಿತು. ವಿ ಕೃ ಗೋಕಾಕ್ ಅವರ ಸಮುದ್ರ ಗೀತೆಗಳು ಸಂಕಲನ ಅಂತಹ ನವ್ಯಕಾವ್ಯ ಸೃಷ್ಟಿಗೆ ಅತ್ಯಂತ ಮಹತ್ವದ ಪ್ರೇರಣೆಯಾಯಿತು. ಕನ್ನಡ ಭಾಷೆ ಮತ್ತು ಛಂದಸ್ಸು ಪ್ರಯೋಗಗಳಲ್ಲಿ ಉಲ್ಲೇಖಾರ್ಹ ನಾವೀನ್ಯತೆ ಮತ್ತು ಭಾಷಾ ಹೊಸತನವನ್ನು ತಂದವರು ವಿ ಕೃ ಗೋಕಾಕರು . ಡಿವಿಜಿ , ಗೋಪಾಲ ಕೃಷ್ಣ ಅಡಿಗರು , ಮೊದಲಾದವರು ಕಾವ್ಯದ ವಿಷಯ ಆಯ್ಕೆಯಲ್ಲಿ ನವೀನ ಪ್ರಯೋಗವನ್ನು ಮಾಡತೊಡಗಿದರು. ಹೊಸ ಛಂದಸ್ಸುಗಳ ಪ್ರಯೋಗದ ಮೂಲಕ ಸಮಾಜದ ಬಹು ಸಂಖ್ಯಾತರ ನಿತ್ಯದ ಆಡು ಮಾತುಗಳ ಬಳಕೆ ಮಾಡಿ ಕಾವ್ಯವನ್ನು ಸೃಷ್ಟಿಸುವಲ್ಲಿ ಯಶಸ್ವಿಯಾದರು. ಮಾನವನ ಜೀವನದ ಹಲವು ಆಯಾಮಗಳ ಸಾಮಾಜಿಕ ದ್ವಂದ್ವಗಳನ್ನು ಕುರಿತು ಕನ್ನಡ ಭಾಷೆಯಲ್ಲಿ ವಿನೂತನ ಪ್ರಯೋಗಗಳನ್ನು ಮಾಡಿದರು. ಚಂದ್ರಶೇಖರ ಪಾಟೀಲರು ತಮ್ಮ ಬಾನುಲಿ , ಮದ್ಯಬಿಂದು ಮೊದಲದ ಕವನಗಳ ಮೂಲಕ ಸಮಾಕಾಲೀನ ಪ್ರಜ್ಞೆ ಮತ್ತು ಜೀವನದ ದ್ವಂದ್ವಗಳ ಕುರಿತು ಹೊರ ತಂದ ಕವನ ಸಂಕಲನಗಳು ಸಾಮಾಜಿಕ ದೃಷ್ಟಿಕೋನಕ್ಕೆ ಹಿಡಿದ ಕೈಗನ್ನಡಿಯಂತಿದ್ದವು. ನೂತನ ಪದೋದ್ವೃತ್ತಿಯ ಬಳಕೆ ಮೂಲಕ ಅಭಿವ್ಯಕ್ತಿಸಿದ ಸಾಮಾಜಿಕ ವಿಷಯಗಳು ಕಾವ್ಯಾಸಕ್ತರಿಗೆ ಬಹಳ ಆಕರ್ಷಣೀಯವೆನಿಸಿ ತಮ್ಮದೇ ಮಾನಸಿಕ ಮತ್ತು ಸಾಮಾಜಿಕ ತುಮುಲಗಳನ್ನು ಪ್ರತಿಧ್ವನಿಸಿದ ಈ ಸಾಹಿತ್ಯ ಸೃಷ್ಟಿ ಕನ್ನಡ ಭಾಷೆಯ ಓದುಗರ ಸಂಖ್ಯೆಯನ್ನು ಇಮ್ಮಡಿ ಗೊಳಿಸಿತು. ಚಂದ್ರಶೇಖರ ಕಂಬಾರ ಅವರ ಹೇಳತೇನ ಕೇಳ , ತಕರಾರಿನವರು ಮೊದಲಾದ ಕವನ ಸಂಕಲನಗಳು ಜಾನಪದೀಯ ಭಾಷಾ ಬಳಕೆಯಿಂದ ಗುರುತಿಸಿಕೊಂಡಿತು. ಸುಮತೀಂದ್ರ ನಾಡಿಗ್ ಅವರ ಲೀಲಾ ರಾಮರ ಕತೆಗಳು , ಕಪ್ಪು ದೇವತೆ ಮೊದಲಾದ ಕವನ ಸಂಕಲನಗಳು, ನಿಸಾರ್ ಅಹಮದ್ ಅವರ ನೆನೆದವರ ಮನದಲ್ಲಿ , ಗಾಂಧೀ ಬಜಾರು ಮೊದಲಾದ ಕವನ ಸಂಕಲನಗಳು ಲಕ್ಷ್ಮೀನಾರಾಯಣ ಭಟ್ಟರ ವೃತ್ತ, ಸುಳಿ, ನಿನೆಗೆ ನನ್ನ ಮಾತು ಮೊದಲಾದ ಕವನ ಸಂಕಲನಗಳು ಜನ ಮಾನಸದ ಮನದ ಮಾತುಗಳನ್ನೇ ಕವನ ರೂಪದಲ್ಲಿ ಬರೆಯಲಾಗಿದೆಯೇನೋ ಎಂಬ ಮಟ್ಟಿಗೆ ಜನರ ಮನ ಮುಟ್ಟಿತು.

*Copyright © 2025, Scholarly Research Journal for Interdisciplinary Studies*

೫. ದಲಿತ, ಬಂಡಾಯ ಸಾಹಿತ್ಯದಲ್ಲಿ ಸಾಮಾಜಿಕ ಬದಲಾವಣೆಗಳ ಪ್ರತಿಧ್ವನಿ- ಸಾಮಾಜಿಕವಾಗಿ ಆರ್ಥಿಕವಾಗಿ ರಾಜಕೀಯವಾಗಿ ಅಪಮಾನಕ್ಕೆ ಶೋಷಣೆಗೆ ಕ್ರೌರ್ಯಕ್ಕೆ ಬಲಿಯಾದ ಜನರ ದನಿಯೇ ಬಂಡಾಯ ಸಾಹಿತ್ಯದ ಸಾರ. ಜಾತಿ ವ್ಯವಸ್ಥೆ , ಶ್ರೇಣೀಕೃತ ಸಮಾಜ ವ್ಯವಸ್ಥೆ ಮೊದಲಾದ ಅನಿಷ್ಟಗಳ ವಿರುದ್ಧ ಹೋರಾಡಲು ಬಂಡಾಯ ಸಾಹಿತ್ಯವು ಅಸ್ತ್ರವಾಯಿತು. ಸ್ವ ಅನುಭವಗಳ ಕಥನಗಳ ಮೂಲಕ ಬಂಡಾಯವನ್ನು ದಾಖಲಿಸುವುದು ಮುಂದುವರೆದು , ಬಂಡಾಯ ಸಾಹಿತ್ಯ ನಿಧಾನವಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ತನ್ನದೇ ಆದ ತಾತ್ವಿಕ ನೆಲೆಗಟ್ಟನ್ನು ರೂಪಿಸಿಕೊಳ್ಳ ತೊಡಗಿತು. ಮಾನವ ಹಕ್ಕುಗಳನ್ನು ಸಹಜವಾಗಿ ಪ್ರತಿಪಾದಿಸಲು ಕರೆ ಕೊಟ್ಟು ಬಹು ಜನರು ತಮ್ಮ ಹಕ್ಕುಗಳನ್ನು ಅರತಿಲ್ಲದೇ ಇರುವುದೇ ಅವರ ಸಾಮಾಜಿಕ ಮೌಢ್ಯವಾಗಿದೆ ಆದ್ದರಿಂದ ಅವರು ಎಚ್ಚೆತ್ತು ಕೊಳ್ಳಬೇಕು ಎಂದು ಪ್ರತಿಪಾದಿಸಿತು. ಮಾನವನ ಹಕ್ಕುಗಳನ್ನು ಕಿತ್ತುಕೊಳ್ಳುವ ಯಜಮಾನ ಸಂಸತಿಯ ವಿರುದ್ಧವಾಗಿ ಬಂಡಾಯ ಸಾಹಿತ್ಯವು ಶೋಷಿತರ , ದಮನಿತರ ಮತ್ತು ಶ್ರಮಿಕ ವರ್ಗದವರ ದನಿಯಾಗಿ ಹೊರ ಹೊಮ್ಮಿತು. ಬಂಡಾಯ ಸಾಹಿತಿಗಳು ದಮನಿತರನ್ನು , ಶೋಷಿತರನ್ನು , ಶ್ರಮಿಕ ವರ್ಗದವರನ್ನೂ , ದಲಿತರನ್ನು ಸಂಘಟಿಸುತ್ತಾ ನ್ಯಾಯಕ್ಕಾಗಿ ವಿವಿಧ ಪ್ರಾದೇಶಿಕ ಸಾಹಿತ್ಯ ವೇದಿಕೆಗಳ ಮೂಲಕ ಬಂಡಾಯ ಸಾಹಿತ್ಯ ಎಲ್ಲಾ ಶೋಷಿತರ ಮುಖವಾಣಿಗಳಂತೆ ಕಾರ್ಯ ನಿರ್ವಹಿಸಲು ಸಾಧ್ಯವಾಗವಂತಹ ತಾತ್ವಿಕ ಗಟ್ಟಿತನವನ್ನು ಪ್ರದರ್ಶಿಸುತ್ತಾ ಬಂದು ಸಮಾಜವನ್ನು ವರ್ಗ ರಹಿತವಾಗಿ ಕಟ್ಟುವ ಕಾರ್ಯದಲ್ಲಿ ತೊಡಗಿದರು. ಸಾಮಾಜಿಕ ಪರಿವರ್ತನೆ , ಸಾಮಾಜಿಕ ಸುಧಾರಣೆಗಳು ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಬದಲಾಯಿಸುವ ಗುರಿಯನ್ನು ಸಾಹಿತ್ಯದ ಮೂಲಕ ಪ್ರದರ್ಶಿಸಿದರು. ಬಂಡಾಯ ಸಾಹಿತ್ಯದಲ್ಲಿ ಕೆಲವು ಪ್ರಮುಖ ಕೃತಿಗಳೆಂದರೆ ಬೆಸಗರಹಳ್ಳಿ ರಾಮಣ್ಣ ಅವರ ಒಂದು ಹುಡಗನಿಗೆ ಬಿದ್ದ ಕನಸು , ಬಳ್ಳಾರಿ ಗವಿಸಿದ್ದ ಅವರ ಕತ್ತಲ ದೇಶದ ಪದ್ಯಗಳು , ಬರಗೂರು ರಾಮಚಂದ್ರಪ್ಪ ಅವರ ಸೀಳು ನೆಲ , ಸಿದ್ದಲಿಂಗಯ್ಯ ಅವರ ಹೊಲೆ ಮಾದಿಗರ ಹಾಡು , ಅಲ್ಲಮ ಪ್ರಭು ಬೆಟ್ಟದೂರು ಅವರ ಇದು ನನ್ನ ಭಾರತ , ಇಂಧೂದರ ಹೊನ್ನಾಪುರ ಅವರ ಬಂಡಾಯ ಕಾವ್ಯ ಇತ್ಯಾದಿ ರಮ್‌ಜಾನ್ ದರ್ಗಾ ಅವರ ಕಾವ್ಯ ಬಂತು ಬೀದಿಗೆ , ರಂಗಾರೆಡ್ಡಿ ಕೋಡಿ ರಾಮ್ ಪುರ ಅವರ ಒಂದು ಸೊಸೈಟಿಯ ಕತೆ , ಎಸ್ ಎಸ್ ಹಿರೇಮಠ ಅವರ ಮನುಶನೆಲ್ಲಿ , ಹೊರೆಯಾಲ ದೊರೆಸ್ವಾಮಿ ಅವರ ಕೂಳೆ , ಕಾಳೇಗೌಡ ನಾಗವಾರ ಅವರ ಬೆಟ್ಟಸಾಲು ಮಳೆ , ಚಂದ್ರಶೇಖರ ಪಾಟೀಲ ಅವರ ಓ ನನ್ನ ದೇಶ ಬಾಂಧವರೆ ಇತ್ಯಾದಿ. ಸಮಾಜದಲ್ಲಿ ಎದ್ದು ಕಾಣುತ್ತಿರುವ ಅಸಮಾನತೆಯ ದನಿಯಾಗಿ ದಲಿತರ ಶೋಷಣೆಯ ವಿವಿಧ ಆಯಾಮಗಳನ್ನು ಸಮಾಜಕ್ಕೆ ಮರು ಪರಿಚಯಿಸುವುದು , ಮಾನವ ಹಕ್ಕುಗಳನ್ನು ಉಲ್ಲಂಘನೆಯ ಹಂತಗಳನ್ನು ಪ್ರಾರಂಭದಲ್ಲಿಯೇ ಗುರುತಿಸುವುದು , ಸಮಾಜೋದ್ಧಾರದ ವೇದಿಕೆಗಳನ್ನು ಕಟ್ಟುವುದು , ದಮನಿತರ ಆರ್ಥಿಕ ರಾಜಕೀಯ ಅಭಿವೃದ್ಧಿಗೆ ಸರಳ ಮಾರ್ಗಗಳಿಂದ ಶ್ರಮಿಸುವುದು , ಮೀಸಲಾತಿಗೆ ಆಗ್ರಹಿಸುವುದು , ದಲಿತರ ಶೈಕ್ಷಣಿಕ ಅಭಿವೃದ್ಧಿಗೆ ಅಗತ್ಯದ ಕ್ರಮ ಕೈಗೊಳ್ಳುವಂತೆ ಸಕಾರಗಳನ್ನು ಆಗ್ರಹಿಸುವುದು , ಶೋಷಿತ ವರ್ಗದ ಜನರ ಜೀವನ ಮಟ್ಟ ಸುಧಾರಿಸಲು ಕ್ರಮ ತೆಗೆದುಕೊಳ್ಳಲು ಸಂಘಟನೆಗಳ ಮೂಲಕ ಹೋರಾಡುವುದು , ಮಹಿಳಾ ಹಕ್ಕುಗಳ ರಕ್ಷಣೆಯ ಪ್ರತಿ ಪಾದನೆ ಮೊದಲಾದ ವಿಷಯಗಳು ಬಂಡಾಯ ಕಾವ್ಯದ ಪ್ರಭಾವವಾಗಿ

Copyright © 2025, Scholarly Research Journal for Interdisciplinary Studies

ಪ್ರಚಲಿತಗೊಂಡಿವೆ. ಸಮಾಜದಲ್ಲಿ ಎಲ್ಲರೂ ಒಂದೇ ಎನ್ನುತ್ತಾ ಸಮಾನತೆಯನ್ನು ಸಾರಿ ಎಲ್ಲ ದಲಿತರ ಸಂಘಟನೆ ಮಾಡುತ್ತಾ , ದಲಿತರಿಗೆ ಅಸ್ತಿತ್ವ ಉಳಿಸಿಕೊಳ್ಳಲು ಇರುವ ಮಾರ್ಗೋಪಾಯಗಳ ಕುರಿತು ಚಿಂತನೆ ಮಾಡುವ ಸಾಮಾಜಿಕ ಕಾರ್ಯಕ್ರಮಗಳ ಆಯೋಜನೆಗೆ ಸೂಕ್ತ ವೇದಿಕೆಯನ್ನು ಕಲ್ಪಿಸಿಕೊಟ್ಟಿವೆ. ಈ ಸಾಹಿತ್ಯದ ಮಹತ್ವದ ಸಾಧನೆ ಎಂದರೆ ಸಾಮಾಜಿಕವಾಗಿ ದಲಿತರಿಗೆ ಪ್ರತ್ಯೇಕ ಮೀಸಲಾತಿ , ಶೈಕ್ಷಣಿಕ ಸವಲತ್ತುಗಳೂ , ಆರ್ಥಿಕ ಭದ್ರತೆ ಮತ್ತು ರಾಜಕೀಯ ಪ್ರಾತಿನಿಧಿತ್ವ ದೊರಕಿದೆ.

**ಉಪಸಂಹಾರ :**

ಹೀಗೆ ಕನ್ನಡ ಸಾಹಿತ್ಯದಲ್ಲಿ ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವ ಕಾರ್ಯ ನಿರಂತರವಾಗಿ ಸಾಗಿದೆ. ಕನ್ನಡ ಸಾಹಿತ್ಯವು ಅತ್ಯಂತ ಯಶಸ್ವಿಯಾಗಿ ಸಾಮಾಜಿಕ ಸಮಸ್ಯೆಗಳನ್ನು ಅವಲೋಕಿಸುತ್ತಾ ಸಮಾಜಕ್ಕೆ ಬೋಧೆಯನ್ನು ವೈಚಾರಿಕ ನೆಲೆ ಗಟ್ಟಿನಲ್ಲಿ ಮಾಡುತ್ತಾ ಜನರ ಮಾನಸಿಕ ತುಮುಲಗಳು ಮತ್ತು ವಿಚಾರ ದ್ವಂದ್ವ ಸ್ಥಿತಿಯನ್ನು ಪ್ರತಿಬಿಂಬಿಸುತ್ತಾ ಬಂದಿದೆ. , ಇದಕ್ಕಾಗಿ ಶ್ರೇಣೀಕೃತ ಸಮಾಜದ ಬಿಗಿಮುಷ್ಟಿಯಲ್ಲಿ ಸಿಲುಕಿದ ಜನರ ದನಿಯಾಗಿ ಕನ್ನಡ ಸಾಹಿತ್ಯ ಸಮಾಜೋದ್ಧಾರದ ಕಾರ್ಯ ಮಾಡುತ್ತಾ ಮಾನವನ ಸ್ವಂತಿಕೆ ಮತ್ತು ಅಸ್ಮಿತೆಯ ಹುಡುಕಾಟ ನಡೆಸಿದೆ, ಮಾನವನಲ್ಲಿರುವ ಅಭಿವ್ಯಕ್ತಿ ಗೊಂದಲಗಳನ್ನು ಪ್ರತಿನಿಧಿಸುತ್ತಾ ,ಮಾನವನ ವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುತ್ತಾ , ಸಾಮಾಜಿಕ ಸಾಕ್ಷಿ ಪ್ರಜ್ಞೆಯನ್ನು ಜೀವಂತವಾಗಿ ಇರಿಸಿಕೊಳ್ಳಲು ಮಾನವನಿಗೆ ಬೇಕಾದ ಜೀವನ ಮೌಲ್ಯಗಳ ಆಯ್ಕೆಯ ನಿಷ್ಠತೆಯನ್ನು ಕನ್ನಡ ಸಾಹಿತ್ಯ ಪ್ರತಿಬಿಂಬಿಸಿರುವುದು ಕಂಡು ಬರುತ್ತದೆ ಕನ್ನಡ ಸಾಹಿತ್ಯದ ಮೇರು ಕೊಡುಗೆಗಳನ್ನು ಇನ್ನೂ ಹೆಚ್ಚು ಸಂಶೋಧನೆಗೆ ಒಳಪಡಿಸಿ ಅವುಗಳಲ್ಲಿ ಅಡಕವಾಗಿರುವ ಸಾಮಾಜಿಕ ಪ್ರತಿಬಿಂಬವನ್ನು ಒರೆಗೆ ಹಚ್ಚಬೇಕಾದ ಅನಿವಾರ್ಯತೆಯೂ ಇದೆ.

**ಪರಾಮರ್ಶನ ಗ್ರಂಥಗಳು :**


1. *ಆನಂದ ಮೂರ್ತಿ -ವೀರ ಶೈವ ಸಾಹಿತ್ಯ ಮತ್ತು ಅದರ ಪ್ರಭಾವ , ಧಾರವಾಡ , ೨೦೦೦*
2. *ಕನ್ನಡ ವಿಶ್ವ ಕೋಶ , ಮೈಸೂರು ಪ್ರಸಾರಾಂಗ , ಮೈಸೂರು ವಿಶ್ವ ವಿದ್ಯಾಲಯ , ಮೈಸೂರು , ೨೦೦೦*
3. *ಆರ್. ನರಸಿಂಹಾಚಾರ್ಯ- ಕನ್ನಡ ಸಾಹಿತ್ಯ ಚರಿತ್ರೆ ಕರ್ನಾಟಕ ಸಕಾರದ ಪ್ರಕಟಣೆ ೧೯೯೨*
4. *ಎಂ ಎಂ ಕಲಬುರ್ಗಿ - ಬಸವಣ್ಣನವರ ವಚನ ಸಂಪುಟ , ವಿಕಿಮೀಡಿಯಾ ಕಾಮನ್ಸ್ , ೨೦೨೪*
5. *ಬರಗೂರು ರಾಮಚಂದ್ರಪ್ಪ - ಬಂಡಾಯ ಕವಿಗಳ ಪ್ರಬಲ ಲೇಖನಿಗಳು , ಡೆಕ್ಕನ್ ಹೆರಾಲ್ಡ್ , ೨೨ -೦೮ -೨೦೨೩*
6. *ಸರಜೂ ಕಾಟ್ಕರ್ - ಕನ್ನಡ ಬಂಡಾಯ ಸಾಹಿತ್ಯ , ಸಾಹಿತ್ಯ ಅಕಾಡೆಮಿ ಪ್ರಕಾಶನ, ನವ ದೆಹಲಿ , ೨೦೧೨.*
7. *ಅಕ್ಷಯ್‌ಕುಮಾರ್ - ಕಾವ್ಯ, ರಾಜಕೀಯ ಮತ್ತು ಸಂಸ್ಕೃತಿ , ಭಾರತೀಯ ಪಠ್ಯಗಳು ಮತ್ತು ಸಂದರ್ಭಗಳ ಕುರಿತು , ರೂಟಲೆಡ್ಜ್ ಪ್ರಕಾಶನ , ೨೦೧೪*


*Copyright © 2025, Scholarly Research Journal for Interdisciplinary Studies*

8. ನವ್ಯ ಸಾಹಿತ್ಯದ ಪಠ್ಯಗಳು , ಮೈಸೂರು ವಿಶ್ವ ವಿದ್ಯಾಲಯ ಪ್ರಕಟಣೆ , ಮೈಸೂರು , ಪ್ರಸಾರಾಂಗ , ೨೦೧೪
9. ನವೋದಯ ಸಾಹಿತ್ಯ ,ಸಂ. ತಿಪ್ಪೇರುದ್ರ ಸಂಡೂರು, ಶ್ರೀ ಸಿದ್ದಲಿಂಗೇಶ್ವರ ಪ್ರಕಾಶನ ,೨೦೨೨
10. ನವ ಸಾಹಿತ್ಯ , ಕನ್ನಡ ಸಾಹಿತ್ಯ ಅಕಾಡೆಮಿ ಪ್ರಕಟಿತ , ೨೦೨೨
11. ಕನ್ನಡ ಜ್ಞಾನ ಕೋಶ- ಕಣಜ , ೨೦ ನೇ ಶತಮಾನದ ಕನ್ನಡದ ಸಾಹಿತ್ಯ ಘಟ್ಟಗಳು ,
12. ಅಕ್ಷಯ್‌ಕುಮಾರ್ - ಭಾರತದ ದಲಿತರು - ಜನಾಂಗೀಯತೆ ಮತ್ತು ಸಮಕಾಲೀನ ಬದಲಾವಣೆ , ೨೦೧೦
13. ಅಕ್ಷಯ್‌ಕುಮಾರ್ - ಕಾವ್ಯ, ರಾಜಕೀಯ ಮತ್ತು ಸಂಸ್ಕೃತಿ , ಭಾರತೀಯ ಪಠ್ಯಗಳು ಮತ್ತು ಸಂದರ್ಭಗಳ ಕುರಿತು , ರೂಟಲೆಡ್ಜ್ ಪ್ರಕಾಶನ , ೨೦೧೪
14. ಎಮ್ ಎಸ್ ತಿಮ್ಮಾ ನಾಯಕ್- ಅಂಚಿನಲ್ಲಿರುವ ಸಮಾಜದಲ್ಲಿ ದಲಿತ ಸಾಹಿತ್ಯ ಮತ್ತು ಸಂಸ್ಕೃತಿ , ಶೋಧ ಮಂಥನ , ೨೦೧೯

Copyright © 2025, Scholarly Research Journal for Interdisciplinary Studies